# ಶ್ರೀಮಾತೆಯವರ ನೆನಪುಗಳು

ಇಂಗ್ಲಿಷ್ ಮೂಲ : **ಕುಮುದ ಬಂಧು ಸೇನ್**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

**ಭಾಗ - ೨**

‘‘**ಯಾ**ವ ಧನ್ಯ ಮಾತೆಯ ಮಗ ನೀನು?’’

‘‘ಅಮ್ಮಾ, ನಾನು ನಿಮ್ಮ ಮಗ.’’

ನನ್ನ ಜೀವನದಲ್ಲಿ ಮೊತ್ತ ಮೊದಲ ಬಾರಿಗೆ ಶ್ರೀಮಾತೆಯವರ ಧ್ವನಿಯನ್ನು ಕೇಳಿದ್ದೆ. ಪ್ರೀತಿ ತುಂಬಿದ ಧ್ವನಿಯಿಂದ ಅವರು ನನಗೆ ಆ ಪ್ರಶ್ನೆಯನ್ನು ಕೇಳಿದ್ದರು. ನನ್ನ ಉತ್ತರ ಅವರಿಗೆ ಸಂತಸವನ್ನು ಉಂಟುಮಾಡಿರಬೇಕು. ಈ ಮಾತುಕತೆ ನಡೆದುದು ಕಲ್ಕತ್ತೆಯ ಉತ್ತರ ಭಾಗದಲ್ಲಿರುವ ಬಾಗ್‌ಬಜಾರ್ ಪ್ರದೇಶದಲ್ಲಿದ್ದ ಹಲೂದ್‌ಗುದಾಮ್ ಬಾಡಿ ಎಂಬ ಮನೆಯಲ್ಲಿ. (ಅಂದರೆ, ಅರಶಿಣವನ್ನು ತುಂಬಿಡುವ ಉಗ್ರಾಣದ ಮನೆ ಎಂದರ್ಥ). ಅದು ಮೂರು ಅಂತಸ್ತಿನ ಮನೆಯಾಗಿತ್ತು. ಕೆಳ ಅಂತಸ್ತಿನಲ್ಲಿ ಉಗ್ರಾಣ; ಮೇಲಿನ ಎರಡು ಅಂತಸ್ತುಗಳು ವಾಸದ ಮನೆ ಗಳಾಗಿದ್ದವು. ಆ ಮನೆಯ ಮೊದಲನೆ ಅಂತಸ್ತಿನ ಪೂರ್ವಭಾಗದ ಕಟ್ಟಡದಲ್ಲಿ ಎರಡು ಕೋಣೆಗಳಿದ್ದವು. ಅವೆರಡೂ ಕೋಣೆಗಳ ನಡುವೆ ಖಾಲಿ ಸ್ಥಳವಿತ್ತು. ಈ ಖಾಲಿ ಸ್ಥಳದ ಪೂರ್ವಭಾಗದಲ್ಲಿ ಎರಡನೇ ಅಂತಸ್ತಿಗೆ ಹೋಗಲು ಮೆಟ್ಟಿಲುಗಳಿದ್ದವು. ಎರಡನೇ ಅಂತಸ್ತಿನಲ್ಲಿ ಶ್ರೀಮಾತೆಯವರು ವಾಸಿಸುತ್ತಿದ್ದರು. ಅವರೊಂದಿಗೆ ಗೋಲಾಪ್ ಮಾ[೧], ಗೋಪಾಲೇರ್ ಮಾ[೨] ಹಾಗೂ ಆಗಾಗ ಅಲ್ಲಿಗೆ ಬಂದು ಕೆಲವು ದಿನಗಳ ಮಟ್ಟಿಗೆ ಅಲ್ಲಿ ಇದ್ದು ಹೋಗು ತ್ತಿದ್ದ ಇತರ ಭಕ್ತೆಯರು ಕೂಡ ಇರುತ್ತಿದ್ದರು. ದಕ್ಷಿಣ ಭಾಗದಲ್ಲಿ ವಿಶಾಲವಾದ ತೆರೆದ ತಾರಸಿಯಿತ್ತು; ಅಲ್ಲಿಂದ ಶ್ರೀಮಾತೆ ಯವರು ಗಂಗೆಯನ್ನು ಚೆನ್ನಾಗಿ ನೋಡಬಹುದಾಗಿತ್ತು. ಅವರಿಗೆ ಗಂಗೆಯ ಮೇಲೆ ಬಾಲ್ಯದಿಂದಲೂ ವಿಶೇಷ ಪ್ರೀತಿ, ಗೌರವ ಗಳಿದ್ದವು.

ನನ್ನ ಉತ್ತರವನ್ನು ಕೇಳಿ ಗೋಪಾಲೇರ್ ಮಾ ಶ್ರೀಮಾತೆಯವರಿಗೆ ಹೇಳಿದರು: ‘‘ನನ್ನ ಗೋಪಾಲ ಅವನ ಮಾಯಾ ಜಾಲದಿಂದ ನಿನ್ನ ಬಳಿಗೆ ಅನೇಕ ಮುದ್ದಾದ ಮಕ್ಕಳನ್ನು ಕರೆತರು



ತ್ತಾನೆ.’’ ಆಗ ಶ್ರೀಮಾತೆ ತಮ್ಮ ಮುಖದ ಮೇಲೆ ಸೆರಗಿಲ್ಲದೆ ನನ್ನ ಮುಂದೆ ನಿಂತಿದ್ದರು. ಸಾಮಾನ್ಯವಾಗಿ ಅಪರಿಚಿತರು ಅವರ ದರ್ಶನ ಪಡೆಯಲು ಹೋದಾಗ ಅವರು ಮುಖದ ಮೇಲೆ ಸೆರಗು ಹೊದ್ದುಕೊಂಡೇ ಇರುತ್ತಿದ್ದರು. ನನ್ನ ಹೃದಯದಲ್ಲಿ ತುಂಬಿ ಬಂದ ಅವರ್ಣನೀಯ ಆನಂದದೊಂದಿಗೆ ನಾನು ಅವರ ದರ್ಶನ ಪಡೆದೆ. ಅವರ ಶಾಂತವಾದ, ಅನುಕಂಪದಿಂದ ಕೂಡಿದ ಹಾಗೂ ಕೃಪಾಪೂರ್ಣವಾದ ದೃಷ್ಟಿ, ದೈವೀ ಕರುಣೆ ಹಾಗೂ ಪ್ರೀತಿ-ಅನುಕಂಪಗಳಿಂದ ಬೆಳಗುತ್ತಿದ್ದ ಮುಖ, ಮಾತೃತ್ವದ ವಾತ್ಸಲ್ಯ-ಮೃದುಭಾವಗಳಿಂದ ತುಂಬಿದ ಗಾಂಭೀರ್ಯ — ಇವು ನನ್ನಲ್ಲಿ ಅವರ ಮೇಲೆ ಭರವಸೆ ಹಾಗೂ ವಿಶ್ವಾಸವನ್ನು ತುಂಬುವಂತೆ ಮಾಡಿದವು. ನನ್ನ ಮನಸ್ಸನ್ನು ಅವು ದಿವ್ಯದರ್ಶನ ದಿಂದ ಬೆಳಗಿದವು. ಇಂಥ ದಿವ್ಯತೆಯೇ ನಮ್ಮೆಲ್ಲ ಆಶ್ರಯಸ್ಥಾನ ಹಾಗೂ ಶಕ್ತಿಯಾಗಿದೆ. ನಾನು ಅವರ ಪಾದಗಳಲ್ಲಿ ಹೂಗಳನ್ನು ಅರ್ಪಿಸಿದೆ. ನಾನು ಎಲ್ಲಿ ವಾಸಿಸುತ್ತಿದ್ದೇನೆ, ನನ್ನ ಹೆತ್ತವರು ಬದುಕಿದ್ದಾರೆಯೇ ಎಂದೆಲ್ಲ ಶ್ರೀಮಾತೆಯವರು ವಿಚಾರಿಸಿದರು. ನಾನು ಉತ್ತರಿಸಿದೆ: ‘‘ಇಲ್ಲಮ್ಮಾ, ನನಗೆ ಯಾರೂ ಇಲ್ಲ. ಒಂದೇ ವರ್ಷದಲ್ಲಿ ನನ್ನ ತಂದೆ, ತಾಯಿ ಇಬ್ಬರೂ ಹೋಗಿಬಿಟ್ಟರು.’’ ಶ್ರೀಮಾತೆ ಅನುಕಂಪದ ಹಾಗೂ ಪ್ರೀತಿಯ ಧ್ವನಿಯಿಂದ ಹೇಳಿದರು, ‘‘ಅಯ್ಯೋ, ಎಂಥ ಕಷ್ಟ! ಆದರೆ ಮಗೂ, ಚಿಂತೆ

---

೧ ಗೋಲಾಪ್-ಮಾ ಸಾಕಷ್ಟು ಆಧ್ಯಾತ್ಮಿಕ ಅನುಭವಗಳನ್ನು ಪಡೆದ ಭಕ್ತೆ. ಅವರು ಶ್ರೀರಾಮಕೃಷ್ಣರ ಬಳಿಗೆ ಬಂದು, ಆಧ್ಯಾತ್ಮಿಕವಾಗಿ ಆಶ್ರಯ ಪಡೆದರು. ಶ್ರೀರಾಮ ಕೃಷ್ಣರು ಅವರನ್ನು ತಮ್ಮ ಸ್ವಂತದವರಾಗಿ ಕಂಡರು ಹಾಗೂ ಆಶೀರ್ವದಿಸಿದರು. ಅವರು ಶ್ರೀಮಾತೆಯವರೊಂದಿಗೆ ಯಾವಾಗಲೂ ಇರುತ್ತಿದ್ದ ಆತ್ಮೀಯ ಒಡನಾಡಿ ಯಾಗಿದ್ದರು; ಅವರ ಜೀವಿತದ ಕೊನೆಯವರೆಗೂ ಅವರೊಂದಿಗಿದ್ದರು. ಹಲವು ರೀತಿಯಲ್ಲಿ ಅವರು ಶ್ರೀಮಾತೆಯವರಿಗೆ ಪ್ರೀತಿಯಿಂದ ಸೇವೆ ಮಾಡಿದರು.

೨. ಗೋಪಾಲನ ತಾಯಿ (ಬಂಗಾಳಿಯಲ್ಲಿ ‘ಗೋಪಾಲೇರ್ ಮಾ’ ಎನ್ನುತ್ತಾರೆ)- ಅವರ ನಿಜವಾದ ಹೆಸರು ಅಘೋರಮಣಿ ದೇವಿ. ಅವರು ಶ್ರೀರಾಮಕೃಷ್ಣರ ಪ್ರಧಾನ ಭಕ್ತೆಯರಲ್ಲಿ ಒಬ್ಬಳು.

ಮಾಡಬೇಡ. ಈ ಪ್ರಾಪಂಚಿಕ ಸಂಬಂಧಗಳೆಲ್ಲ ಕ್ಷಣಿಕವಾದವು ಗಳು. ಇಂದು ಅವೆಲ್ಲ ಜೀವನದ ಸರ್ವಸ್ವವೆಂದೇ ಅನ್ನಿಸುವವು; ನಾಳೆ ಅವುಗಳು ಮಾಯವಾಗುವುವು. ನಿನ್ನ ನಿಜವಾದ ಸಂಬಂಧ ವಿರುವುದು ಭಗವಂತನೊಡನೆ — ಠಾಕೂರರೊಡನೆ (ಅಂದರೆ ಶ್ರೀರಾಮಕೃಷ್ಣ ರೊಡನೆ.) ಇಲ್ಲಿಗೆ ಆಗಾಗ ಬರುತ್ತಿರು ಹಾಗೂ ಪ್ರಸಾದ ತೆಗೆದುಕೋ.'' ಭಾವವುಕ್ಕಿ ಬಂದು, ಕಣ್ಣೀರು ತುಂಬಿ ನಾನು ಅವರಿಗೆ ಹೇಳಿದೆ, ''ಅಮ್ಮಾ, ನನಗೆ ನೀವು ಸಿಕ್ಕಿದ್ದೀರಿ — ಜಗನ್ಮಾತೆಯಾದ ನೀವೇ ನನ್ನ ನಿಜವಾದ ತಾಯಿ. ಇದೇ ನನಗೆ ಬಹಳ ದೊಡ್ಡ ಸಮಾಧಾನ. ನನಗೆ ನಿಮ್ಮ ಆಶೀರ್ವಾದ, ಕೃಪೆ ಇವಿಷ್ಟೇ ಸಾಕು.'' ಆಗ ಶ್ರೀಮಾತೆ, ''ಮಗೂ, ಠಾಕೂರರು ಈಗಾಗಲೇ ನಿನ್ನ ಮೇಲೆ ಕೃಪೆ ತೋರಿದ್ದಾರೆ. ನಿನ್ನ ಶಾಲೆಗೆ ರಜೆಯಿದ್ದಾಗಲೆಲ್ಲ ಇಲ್ಲಿಗೆ ಬಂದು, ಇಲ್ಲೇ ಇರು. ಈಗ ನೀನು ಪ್ರಸಾದ ತೆಗೆದುಕೊಂಡು ಯೋಗೇನ್[೩] ಅಥವಾ ರಾಖಾಲ್[೪] ಇವರ ಬಳಿಗೆ ಹೋಗು. ಅವರ ಒಡನಾಟದಿಂದ ನಿನಗೆ ಪ್ರೇರಣೆ ಸಿಗುವುದು; ನಿನ್ನ ಮನಸ್ಸಿನ ಕಷ್ಟ-ಸಂಕಟಗಳು ದೂರವಾಗು ವುವು'' ಎಂದರು. ಶ್ರೀಮಾತೆಯವರು ಸ್ವತಃ ತಮ್ಮ ಕೈಯಿಂದಲೇ ಕೊಟ್ಟ ಹಣ್ಣು, ಸಿಹಿತಿಂಡಿಗಳೊಂದಿಗೆ ಕೂಡಲೇ ನಾನು ಮೆಟ್ಟಿ ಲಿಳಿದು ಕೆಳ ಅಂತಸ್ತಿಗೆ ಬಂದೆ.

ನಾನು ಶ್ರೀಮಾತೆಯವರೊಂದಿಗೆ ನಡೆಸಿದ ಮಾತುಕತೆ ಯನ್ನು ಕೇಳಿ ಸ್ವಾಮಿ ಯೋಗಾನಂದರಿಗೆ ತುಂಬಾ ಸಂತಸ ವುಂಟಾಯಿತು. ನನ್ನ ಅಧ್ಯಯನವನ್ನು ಹೇಗೆ ಮಾಡಬೇಕು, ಹಾಗೂ ಮನಸ್ಸಿನ ನಿಯಂತ್ರಣವನ್ನು ಹೇಗೆ ಮಾಡಬೇಕು ಎಂದು ಅವರು ನನಗೆ ಕೆಲವು ಸಲಹೆಗಳನ್ನಿತ್ತರು. ಅಷ್ಟರಲ್ಲಿ ಸ್ವಾಮಿ ಬ್ರಹ್ಮಾನಂದರು ನನ್ನ ಬಳಿಗೆ ಬಂದು ಹೇಳಿದರು, ''ನೀನು ಬೆಳಿಗ್ಗೆ ಮತ್ತು ಸಾಯಂಕಾಲ ಪ್ರತಿದಿನವೂ ದೈಹಿಕ ವ್ಯಾಯಾಮ ಮಾಡುತ್ತಿದ್ದೀಯಾ? ದೇಹ ಮತ್ತು ಮನಸ್ಸು ಎರಡೂ ಏಕಕಾಲಕ್ಕೆ ಬೆಳವಣಿಗೆ ಹೊಂದಬೇಕು. ಶುಚಿತ್ವವನ್ನು ಯಾವಾಗಲೂ ಕಾಪಾಡಿಕೋ. ಅಧ್ಯಯನವನ್ನು ನಿರ್ಲಕ್ಷ್ಯ ಮಾಡಿ, ಕೆಲಸಕ್ಕೆ ಬಾರದ ಹರಟೆಗಳಿಗೆ ನಿನ್ನನ್ನು ಸೆಳೆಯುವ ಹುಡುಗರೊಂದಿಗೆ ಬೆರೆಯಬೇಡ. ಸುಳ್ಳು ಹೇಳುವ ದುಷ್ಟ ಹುಡುಗರೂ ಇದ್ದಾರೆ. ಬೇರೆ ಹುಡುಗರನ್ನು ಅವರು ಕೆಟ್ಟದಾರಿಗೆ ಎಳೆಯುತ್ತಾರೆ. ಅವರನ್ನು ಸಂಪೂರ್ಣವಾಗಿ ದೂರವಿಡು. ಅವ ರೊಂದಿಗೆ ಮಾತನ್ನೂ ಆಡಬೇಡ. ನೀನು ಸತ್ಯಸಂಧನಾಗಿರ ಬೇಕು. ಶಾಲೆ ಮುಗಿದ ಮೇಲೆ ಇಲ್ಲಿಗೆ ಬಾ; ನಮ್ಮ ಸಲಹೆಗಳನ್ನು ತೆಗೆದುಕೋ. ಅದು ನಿನಗೆ ಜ್ಞಾನ ಸಂಪಾದನೆಗೆ, ಆಧ್ಯಾತ್ಮಿಕ ಪ್ರವೃತಿ ಬೆಳೆಸುವುದಕ್ಕೆ ಸಹಾಯ ಮಾಡುವುದು. ವಿದ್ಯಾರ್ಥಿ ಜೀವನದ ಅವಧಿಯಲ್ಲಿ ಇರಬೇಕಾದ ಆದರ್ಶವೇ ಬ್ರಹ್ಮ ಚರ್ಯ. ಇದನ್ನು ನೆನಪಿನಲ್ಲಿ ಇಟ್ಟುಕೋ. ದೇಹ, ಮನಸ್ಸು ಹಾಗೂ ಮಾತು — ಇವುಗಳಲ್ಲಿ ಯಾವಾಗಲೂ ನೀನು ಪರಿ ಶುದ್ಧನಾಗಿರಬೇಕು.'' ಈ ಮಾತುಗಳು ನನಗೆ ಹೊಸ ಜ್ಞಾನೋ ದಯವನ್ನು ನೀಡಿದವು; ನನ್ನ ಮೇಲೆ ಅಗಾಧ ಪರಿಣಾಮವನ್ನು ಬೀರಿದವು.

ಮಾಸ್ಟರ್ ಮಹಾಶಯರು[೫] ('ಮ', 'ಶ್ರೀರಾಮಕೃಷ್ಣ ವಚನವೇದ' ದ ಲೇಖಕರು) ಅಲ್ಲಿಗೆ ಪ್ರತಿ ಶನಿವಾರ ಸಂಜೆ ಬರುತ್ತಿದ್ದರು. ಭಾನುವಾರ ಸಂಜೆಯವರೆಗೂ, ಕೆಲವೊಮ್ಮೆ ಸೋಮವಾರ ಬೆಳಗ್ಗಿನವರೆಗೂ ಅಲ್ಲಿರುತ್ತಿದ್ದರು. ಸಾಮಾನ್ಯವಾಗಿ ನಾನು ಅವರೊಂದಿಗೆ ರಾತ್ರಿವೇಳೆ ಅಲ್ಲಿರುತ್ತಿದ್ದೆ. ಅವರು ಶ್ರೀರಾಮಕೃಷ್ಣರ ಮತ್ತು ಶ್ರೀಮಾತೆಯವರ ಬಗ್ಗೆ ಅನೇಕ ಸ್ಫೂರ್ತಿ ದಾಯಕವಾದ ಕಥೆಗಳನ್ನು ಹೇಳುತ್ತಿದ್ದರು. ಅಲ್ಲಿಗೆ ಶ್ರೀಮಾತೆ ಯವರ ಭಕ್ತರುಗಳು ಅವರ ದರ್ಶನ ಪಡೆಯಲು ಬರುತ್ತಿದ್ದರು. ಕೆಲವು ಮಂದಿ ಸಾಧಕರು ಅವರಿಂದ ದೀಕ್ಷೆಯನ್ನು ಕೂಡ ಪಡೆ ದರು. ಒಂದು ದಿನ ಒಬ್ಬಾಕೆ ಭಕ್ತೆಗೆ ಶ್ರೀಮಾತೆ ಹೇಳುತ್ತಿದ್ದರು: ''ಕೆಲವೊಮ್ಮೆ ಶ್ರದ್ಧೆಯೇ ಇಲ್ಲದ, ಮನಸ್ಸು ಸ್ಥಿರವಿಲ್ಲದ ಕೆಲವು ಮಂದಿ ದೀಕ್ಷೆ ಪಡೆಯಲು ಬರುತ್ತಾರೆ. ನಾನು ಅವರ ಚರಿತ್ರೆ ಯನ್ನು ಅವರನ್ನು ನೋಡಿ ಹಾಗೂ ಅವರ ನಡವಳಿಕೆಯನ್ನು ಕಂಡು ತಿಳಿದುಬಿಡುತ್ತೇನೆ. ಹಿಂದೆ ಎಂದಾದರೂ ಅವರು ಯಾರಿಂದಲಾದರೂ ದೀಕ್ಷೆ ಪಡೆದಿರುವರೇ ಎಂದು ಅವರನ್ನು ಪ್ರಶ್ನಿಸುತ್ತೇನೆ. ಅವರು ಹೌದು ಎಂದರೆ ನಾನು ಹೇಳುತ್ತೇನೆ, 'ವಿಚಿತ್ರ! ನೀವು ಮತ್ತೆ ದೀಕ್ಷೆ ಪಡೆಯಲು ಬಂದಿದ್ದೀರಿ! ನಿನ್ನ ಗುರು ಈಗಾಗಲೇ ಕೊಟ್ಟ ಮಂತ್ರದ ಮೇಲೆ ನಿನಗೆ ಶ್ರದ್ಧೆ ಯಿಲ್ಲ. ಮಂತ್ರವೆಂದರೆ ಭಗವಂತನ ಪವಿತ್ರ ನಾಮ. ಮತ್ತೊಮ್ಮೆ ದೀಕ್ಷೆ ಪಡೆಯಲು ಯಾಕೆ ಬಂದೆ?' ಅಂತ! ಆಗ ಅವರು ಕ್ಷಮೆ ಕೋರಿ, ಕಣ್ಣೀರಿಳಿಸುತ್ತ ನನ್ನನ್ನು ಪ್ರಾರ್ಥಿಸುತ್ತಾರೆ. ನನಗೆ ಯಾರ ಕಣ್ಣೀ ರನ್ನೇ ಆಗಲಿ, ನೋಡಿದರೆ ಸುಮ್ಮನಿರಲಾಗುವುದಿಲ್ಲ. ಅವರ ಶ್ರದ್ಧೆಯನ್ನು ಬಲಪಡಿಸುವಂತೆ ನಾನು ಶ್ರೀರಾಮಕೃಷ್ಣರಿಗೆ ಪ್ರಾರ್ಥನೆ ಮಾಡಿ, ಬಳಿಕ ಅವರ ನಿರ್ದೇಶನದಂತೆ ಮತ್ತೊಮ್ಮೆ ಅವರಿಗೆ ದೀಕ್ಷೆ ನೀಡುತ್ತೇನೆ — ಅವರು ಈಗಾಗಲೇ ಪಡೆದಿರುವ ಮಂತ್ರವಲ್ಲದೆ ಇನ್ನೊಂದು ಮಂತ್ರ ನೀಡುತ್ತೇನೆ. ಈ ಎರಡನೇ ಮಂತ್ರ ಅವರಿಗೆ ಹೊಸ ಪ್ರೇರಣೆ ನೀಡುವುದು, ದೇವರನಾಮ ದಲ್ಲಿ ಶ್ರದ್ಧೆಯನ್ನು ಹೆಚ್ಚಿಸುವುದು.'' ಆಗ ಆ ಭಕ್ತೆ ಹೇಳಿದಳು, ''ನಿಮ್ಮ ಕೃಪೆಯಿಂದಾಗಿ ಅವರು ಬದುಕಿ ಉಳಿಯುವರು.'' ಕೂಡಲೇ ಶ್ರೀಮಾತೆ ಹೇಳಿದರು, ''ಇಲ್ಲ, ಇಲ್ಲ; ನಾನು ಏನೂ ಅಲ್ಲ. ಠಾಕೂರರೇ ಅವರ ಮೇಲೆ ಕೃಪೆ ತೋರುತ್ತಾರೆ. ನಾನು ಬರೀ ಉಪಕರಣ ಮಾತ್ರ.''

ಒಂದು ಸಲ ಸಾಯಂಕಾಲದ ಹೊತ್ತು ನಾನು ಶ್ರೀಮಾತೆ

---

೩. ಸ್ವಾಮಿ ಯೋಗಾನಂದರು, ಶ್ರೀರಾಮಕೃಷ್ಣರ ನೇರ ಶಿಷ್ಯರು.

೪. ಸ್ವಾಮಿ ಬ್ರಹ್ಮಾನಂದರು, ಶ್ರೀರಾಮಕೃಷ್ಣರ ಇನ್ನೊಬ್ಬರು ನೇರ ಶಿಷ್ಯರು.

೫ ಇವರು ಶ್ರೀರಾಮಕೃಷ್ಣರ ಪ್ರಮುಖ ಗೃಹಸ್ಥ ಶಿಷ್ಯರಲ್ಲಿ ಒಬ್ಬರು. ಇವರ ಪೂರ್ಣ ಹೆಸರು ಮಹೇಂದ್ರನಾಥ ಗುಪ್ತ ಎಂದು.

ಯವರ ದರ್ಶನ ಪಡೆಯಲು ಅವರ ಬಳಿಗೆ ಹೋದೆ. ನೇರವಾಗಿ ಅವರ ಬಳಿಗೆ ಹೋಗುವ ಬದಲು, ನಾನು ಸ್ವಾಮಿ ಯೋಗಾ ನಂದರ ಬಳಿಗೆ ಹೋದೆ. ಅವರು ಶ್ರೀರಾಮಕೃಷ್ಣರ ಗೃಹೀ ಶಿಷ್ಯನಾಗಿದ್ದ ದೇವೇಂದ್ರನಾಥ ಮಜುಂದಾರರೊಡನೆ ಆಳವಾದ ಸಂಭಾಷಣೆಯಲ್ಲಿ ಮುಳುಗಿದ್ದರು. ಸ್ವಾಮಿ ಯೋಗಾನಂದರು ಹೇಳಿದರು, ''ಠಾಕೂರರು ಜ್ಞಾನವೇ ಮೈತಳೆದ ಮೂರ್ತಿ ಯಾಗಿದ್ದರು. ಜಗನ್ಮಾತೆಯೇ ಅವರಿಗೆ ಎಲ್ಲವನ್ನೂ ತಿಳಿಸಿಕೊಟ್ಟಿ ದ್ದರು ಎಂಬುದಾಗಿ ಅವರು ಹಲವುಬಾರಿ ನಮಗೆ ತಿಳಿಸಿದ್ದರು. ಶ್ರೀರಾಮಕೃಷ್ಣರ ಉಪದೇಶ, ಕಥೆಗಳು ಅವರ ಸೂಕ್ಷ್ಮ ಗ್ರಹಿಕೆ ಯನ್ನೂ, ಆಳವಾದ ಚಿಂತನೆಯನ್ನೂ, ಸೂಕ್ಷ್ಮವಾದ ಬುದ್ಧಿ ವಂತಿಕೆಯನ್ನೂ ತೋರಿಸಿಕೊಡುತ್ತವೆ. ಅವು ಮನಸ್ಸಿನ ಮೇಲೆ ಹೊಸ ಬೆಳಕನ್ನು ಚೆಲ್ಲುತ್ತದೆ, ಹಾಗೂ ಮನಸ್ಸಿನ ಎಲ್ಲ ಸಂದೇಹ, ಸಂಕಟಗಳನ್ನು ಹೋಗಲಾಡಿಸುತ್ತವೆ. ಆಗ ನಮಗೆ ಇವೆಲ್ಲ ಅಷ್ಟೊಂದು ಅರ್ಥವಾಗಿರಲಿಲ್ಲ. ಈಗ ಕಾಲ ಸರಿದಂತೆ ನಮಗೆ ಮಾನವದೇಹಧಾರಿಯಾಗಿ ಬಂದ ಆ ಮೂರ್ತಿಯ ಅನಂತ ಜ್ಞಾನ, ಅಸೀಮ ಪ್ರೀತಿ ಇವುಗಳ ಒಂದಂಶ ಗೋಚರವಾಗು ತ್ತಿದೆ. ಅವರ ಸಾಮಾನ್ಯ ಮಾತಿನ ಹಿಂದೆ ಕೂಡ ಆಳವಾದ ಅರ್ಥ ಅಡಗಿರುವಂತೆ ನಮಗನ್ನಿಸುತ್ತಿತ್ತು. ವೈಷ್ಣವ ಭಕ್ತರು ಚೈತನ್ಯರ ಬಗ್ಗೆ ಹೇಳುತ್ತಿದ್ದರು, ಅವರು ಭಾವಸಮಾಧಿ ಅಥವಾ ದೈವೋ ನ್ಮಾದದ ಅವಸ್ಥೆಯಲ್ಲಿದ್ದಾಗ ಅವರು ಮಾಡಿದ ಪ್ರತಿಯೊಂದು ಕ್ರಿಯೆಯೂ ದೈವೀಲೀಲೆಯೇ ಆಗಿರುತ್ತಿತ್ತು ಎಂಬುದಾಗಿ. ಠಾಕೂರರ ವಿಷಯದಲ್ಲೂ ಇದು ನಿಜವೆಂಬುದು ನಮಗೆ ಅನು ಭವದಿಂದ ಈಗ ತಿಳಿದುಬಂದಿದೆ. ಅವರು ತಮ್ಮ ಬಾಲ್ಯ ದಿಂದಲೂ ದೈವೋನ್ಮಾದದಿಂದ ಕೂಡಿದ್ದರು. ಅವರ ಜ್ಞಾನ, ಚಾರಿತ್ರ್ಯ, ಹಾಗೂ ಅಸಾಧಾರಣ ವ್ಯಕ್ತಿತ್ವವು ಸಮಾಜದ ತೀರ ಕನಿಷ್ಠ ವ್ಯಕ್ತಿಯಿಂದ ಹಿಡಿದು ಅತ್ಯುನ್ನತ ವ್ಯಕ್ತಿಯವರೆಗೆ ಎಲ್ಲ ರನ್ನೂ ತಮ್ಮತ್ತ ಆಕರ್ಷಿಸಿತ್ತು. ಒಬ್ಬ ವ್ಯಕ್ತಿ ಪಾಪಿಯಾಗಿರಲಿ, ಸಂತನಾಗಿರಲಿ ಯಾರನ್ನೂ ಅವರು ತಿರಸ್ಕರಿಸಲಿಲ್ಲ. ಜನಸಾಮಾ ನ್ಯರಿಗೆ ಅವರ ಉಪದೇಶ, ಸಂದೇಶಗಳ ಆಳವಾದ ಅರ್ಥ ಏನೆಂಬುದು ತಿಳಿಯುತ್ತಿರಲಿಲ್ಲ. ಅವರ ಅದ್ಭುತ ಜೀವನ, ನಿಷ್ಕ ಳಂಕ ಪಾವಿತ್ರ್ಯ, ಅಸೀಮ ಪ್ರೀತಿ, ಸರ್ವವ್ಯಾಪಕವಾದ ಆಧ್ಯಾ ತ್ಮಿಕ ಸಾಕ್ಷಾತ್ಕಾರ, ಹಾಗೂ ಅನುಪಮವಾದ ತಪಸ್ಸು ಹಾಗೂ ತ್ಯಾಗ ಇವು ಅವರಿಗೆ ಅರ್ಥವಾಗುತ್ತಿರಲಿಲ್ಲ. ಅವರ ಜೀವನ ವೆಂಬುದು ಶಾಸ್ತ್ರಗಳಲ್ಲಿ ಹೇಳಿದ ಹಾಗೂ ಅವತಾರ ಪುರುಷರು, ಪ್ರವಾದಿಗಳು ಕಂಡುಕೊಂಡ ಎಲ್ಲ ಆಧ್ಯಾತ್ಮಿಕ ಸತ್ಯಗಳ ಜೀವಂತ ನಿದರ್ಶನವಾಗಿತ್ತು. ಅವರು ನರೇನ್ (ಸ್ವಾಮಿ ವಿವೇಕಾ ನಂದರು) ಅನ್ನು ತಮ್ಮ ಉನ್ನತ ಆದರ್ಶಗಳನ್ನು ಜನಸಾಮಾನ್ಯ ರಿಗೆ ಹರಡಲು ಹಾಗೂ ಅವರಲ್ಲಿ ಜಾಗೃತಿಯನ್ನುಂಟುಮಾಡಿ ಲೋಕಹಿತವನ್ನು ಸಾಧಿಸಲು, ಸಪ್ತರ್ಷಿಮಂಡಲದಿಂದ ವಿಶೇಷ ವಾಗಿ ಕರೆತಂದರು.'' ದೇವೇಂದ್ರನಾಥ ಮಜುಂದಾರ್ ಕೂಡ ಶ್ರೀರಾಮಕೃಷ್ಣರ ಬಗ್ಗೆ ಹೇಳಿದರು. ಅವರು ಪ್ರಾಪಂಚಿಕ ಜೀವನವನ್ನು ತ್ಯಾಗಮಾಡಲು ನಿರ್ಧರಿಸಿದಾಗ ಶ್ರೀರಾಮ ಕೃಷ್ಣರು ಅವರ ಮೇಲೆ ತೋರಿದ ಕೃಪೆ, ಅನುಕಂಪಗಳ ಬಗ್ಗೆ ಅವರು ಹೇಳಿದ್ದರು. ಅವರು ತಮಗೆ ತಮ್ಮ ದುಃಖಿತಪ್ತರಾದ ವೃದ್ಧ ತಾಯಿಯನ್ನು ನೆನಪಿಸುತ್ತ, ''ನಿನ್ನ ತಮ್ಮ ಸುರೇಂದ್ರ ತೀರಿ ಕೊಂಡಿದ್ದಾನೆ. ಈಗ ಸಾಕ್ಷಾತ್ ಜೀವಂತ ಜಗನ್ಮಾತೆಯೇ ಆಗಿ ರುವ ನಿನ್ನ ತಾಯಿಯನ್ನು ನೋಡಿಕೊಳ್ಳುವುದು ನಿನ್ನ ಧರ್ಮ. ದುಃಖ ಅಥವಾ ಕಷ್ಟದಿಂದ ಉತ್ಪನ್ನವಾಗುವ ವೈರಾಗ್ಯ ಹೆಚ್ಚು ಕಾಲ ನಿಲ್ಲದು. ನೀನು ಪ್ರಪಂಚದಲ್ಲಿದ್ದುಕೊಂಡು ನಿನ್ನ ತಾಯಿಯ ಸೇವೆ ಮಾಡು. ಇದೇ ನಿನ್ನ ಆದ್ಯ ಕರ್ತವ್ಯ ಹಾಗೂ ಧರ್ಮ. ಇದನ್ನು ನೀನು ಪ್ರಾಮಾಣಿಕವಾಗಿ ಮಾಡು, ಈ ಮೂಲಕವೇ ನೀನು ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿಯುವೆ'' ಎಂದಿ ದ್ದರು. ನಾನು ಈ ಮಾತುಕತೆಗಳನ್ನು ಗಮನಕೊಟ್ಟುಕೇಳುತ್ತಿದ್ದೆ. ರಾತ್ರಿ ತುಂಬ ತಡವಾಗಿದ್ದುದರಿಂದ ದೇವೇಂದ್ರನಾಥ ಮಜುಂ ದಾರ್ ಹೊರಟುಹೋದರು. ಅವರು ಹೋದ ಕೂಡಲೇ ನನಗೆ ನೆನಪಾಯಿತು, ನಾನಿನ್ನೂ ಶ್ರೀಮಾತೆಯವರ ಭೇಟಿಯಾಗಿಲ್ಲ — ನಾನು ಅವರ ದರ್ಶನಕ್ಕಾಗಿಯೇ ಬಂದಿದ್ದರೂ ಕೂಡ, ಈ ಬಗ್ಗೆ ನಾನು ಸ್ವಾಮಿ ಯೋಗಾನಂದರಿಗೆ ತಿಳಿಸಿದೆ. ಅವರು ಗೋಲಾಪ್-ಮಾ ಅವರನ್ನು ಕರೆದು, ಶ್ರೀಮಾತೆಯವರಿಗೆ ನನ್ನ ಬಗ್ಗೆ ತಿಳಿಸಲು ಹೇಳಿದರು. ಆದರೆ ಗೋಲಾಪ್ ಮಾ, ''ಶ್ರೀಮಾತೆ ಮಲಗಿಬಿಟ್ಟಿದ್ದಾರೆ'' ಎಂದರು. ಬೇಸರ, ನಿರಾಸೆ ಗಳಿಂದ ಕೂಡಿದ್ದ ನನ್ನನ್ನು ಕಂಡು ಸ್ವಾಮಿ ಯೋಗಾನಂದರು ಹೇಳಿದರು, ''ಈಗ ಏನೂ ಮಾಡಲಾಗದು. ಶ್ರೀಮಾತೆ ಮಲಗಿ ಬಿಟ್ಟಿದ್ದಾರೆ. ನಾಳೆ ಬಾ.'' ಅವರು ಹೀಗೆಂದ ಕೂಡಲೇ ಗೋಲಾಪ್ ಮಾ ನನ್ನನ್ನು ಕರೆದು, ''ಶ್ರೀಮಾತೆ ನಿನಗೋಸ್ಕರ ಕಾಯುತ್ತಿದ್ದಾರೆ, ಬೇಗ ಬಾ'' ಎಂದರು. ನನ್ನ ಹೃದಯ ಆನಂದದಿಂದ ಉಕ್ಕಿ ಬಂತು. ಕೂಡಲೇ ನಾನು ಮೇಲಂತಸ್ತಿಗೆ ಹೋದೆ. ಶ್ರೀಮಾತೆಯವರ ಪಾದಗಳನ್ನು ಸ್ಪರ್ಶಿಸುವ ಭಾಗ್ಯ ನನಗೆ ಲಭಿಸಿತು. ಶ್ರೀಮಾತೆ ನನ್ನನ್ನು ಕೇಳಿದರು, ''ನೀನು ಯಾಕೆ ಇಷ್ಟು ತಡ ಮಾಡಿದೆ?'' ನಾನಂದೆ, ''ಅಮ್ಮಾ, ನಾನು ಯೋಗೇನ್ ಮಹಾರಾಜ್ ಹಾಗೂ ದೇವೇನ್ ಮಜುಂದಾರ್ ಮಾತನಾಡುತ್ತಿದ್ದುದನ್ನು ಕೇಳಿಸಿಕೊಳ್ಳುತ್ತ ಎಲ್ಲವನ್ನೂ ಮರೆತು ಬಿಟ್ಟೆ.'' ಶ್ರೀಮಾತೆ ನಗುತ್ತ ನನಗೆ ಆಶೀರ್ವಾದ ಮಾಡಿ ಹೇಳಿ ದರು, ''ಓ! ನೀನು ಠಾಕೂರರೊಂದಿಗೆ ಇದ್ದೆ. ಅವರ ದಿವ್ಯ ಲೀಲೆಯನ್ನು ಕೇಳುತ್ತ ಆನಂದಿಸುತ್ತಿದ್ದೆ, ನಿನ್ನ ತಾಯಿಯನ್ನು ಮರೆತೇಬಿಟ್ಟೆ.'' ನನಗೆ ಯಾವುದೇ ಸೂಕ್ತ ಉತ್ತರ ನೀಡಲಾಗದೆ ನಾನು ಮೂಕನಾಗಿ ನಿಂತಿದ್ದೆ. ಶ್ರೀಮಾತೆ ಮೃದುವಾಗಿ ಹೇಳಿ ದರು, ''ಈಗ ನೀನು ಮನೆಗೆ ಹೋಗು. ರಾತ್ರಿ ತುಂಬ ತಡ ವಾಗಿಬಿಟ್ಟಿದೆ.'' ಆನಂದದಿಂದ ತುಂಬಿದ ಹೃದಯದೊಂದಿಗೆ ನಾನು ಕೆಳ ಅಂತಸ್ತಿಗೆ ಬಂದು, ಅಲ್ಲಿದ್ದ ಸ್ವಾಮೀಜಿಗಳನ್ನು ಬೀಳ್ಕೊಂಡೆ. ಶ್ರೀಮಾತೆ ನನ್ನ ಮೇಲೆ ಎಂಥ ಪ್ರೀತಿ, ಕರುಣೆ ಗಳನ್ನು ತೋರಿಸಿದ್ದಾರೆ! — ಹೀಗೆ ನಾನು ಭಾವಿಸಿದೆ. ನನಗೆ ದರ್ಶನ ನೀಡುವುದಕ್ಕಾಗಿ ಅವರು ರಾತ್ರಿ ಹೊತ್ತು ತಮ್ಮ ಹಾಸಿಗೆ

ಯಿಂದ ಎದ್ದು ಬಂದುಬಿಟ್ಟಿದ್ದರು.

ಸುಪರಿಚಿತರಾದ ಭಕ್ತರು ಕರೆತಂದ ಹೊರಗಿನ ವ್ಯಕ್ತಿಗಳೆಲ್ಲ ಈಗಾಗಲೇ ಮುಕ್ತವಾಗಿ ಶ್ರೀಮಾತೆಯವರ ಬಳಿಗೆ ಬಂದು ಅವರ ದರ್ಶನ ಪಡೆಯಲಾರಂಭಿಸಿದ್ದರು. ಈ ವಿಷಯವಾಗಿ ಹಿಂದಿದ್ದ ಕಟ್ಟುನಿಟ್ಟು ಈಗ ಬಹುತೇಕ ಸಡಿಲವಾಗಿತ್ತು. ನಾಗ ಮಹಾಶಯರು[೬] ಶ್ರೀಮಾತೆಯವರ ದರ್ಶನ ಪಡೆಯಲು ಈ ಮನೆಗೆ ಬಂದಿದ್ದರು. ಅವರಿಗೆ ಸಾಲವೃಕ್ಷದ ಎಲೆಯಲ್ಲಿ ಪ್ರಸಾದ ನೀಡಿದ್ದರು. ಅವರು ಎಲೆಯನ್ನು ಬಿಸಾಡದೆ, ಪ್ರಸಾದ ತಿಂದಾದ ಬಳಿಕ ಎಲೆಯನ್ನೇ ತಿಂದುಬಿಟ್ಟರು. ಇದನ್ನೂ ನೋಡಿ ಎಲ್ಲರೂ ದಂಗಾದರು. ಪ್ರಸಾದದ ಮೇಲೆ ಅವರಿಗಿದ್ದ ಭಕ್ತಿಯನ್ನು ನೋಡಿ ಎಲ್ಲರಿಗೂ ಹೃದಯ ಕಲಕಿ ಹೋಗಿತ್ತು ಅವರ ಪಾಲಿಗೆ ಪ್ರಸಾದ ವನ್ನು ನೀಡಿದ ಎಲೆಯೂ ಪವಿತ್ರವಾಗಿತ್ತು; ಅದೂ ಪ್ರಸಾದವೇ ಆಗಿ ಬಿಟ್ಟಿತ್ತು! ಈ ಬಗ್ಗೆ ಶ್ರೀಮಾತೆ ಮಾತನಾಡುತ್ತ ಅವರ ಮೇಲೆ ಕೃಪೆ ತೋರಿ ಹೀಗೆ ಹೇಳಿದ್ದರು, ''ಠಾಕೂರರ ಬಳಿಗೆ ಎಷ್ಟೋ ಮಂದಿ ಭಕ್ತರು ಬಂದಿದ್ದರು; ಆದರೆ ದುರ್ಗಾ ಚರಣನಂಥ ಭಕ್ತರನ್ನು ಕಾಣುವುದು ತುಂಬಾ ಅಪರೂಪ.'' ದುರ್ಗಾಚರಣ್ ನಾಗ್ ಅವರು ಕಂಪಿಸಿಸುವ ತುಟಿಗಳಿಂದ ''ಮಾತೆಯವರ ಕೃಪೆ ಅಪಾರ, ಅವರ ಅನುಕಂಪೆ ಅಪಾರ'' ಎನ್ನುವಾಗ ಅವರ ಇಡೀ ದೇಹ ಭಾವವಿಹ್ವಲಗೊಂಡು ನಡುಗುತ್ತಿತ್ತು. ಅದನ್ನು ನೋಡು ವುದೇ ಒಂದು ಸ್ವರ್ಗೀಯ ದೃಶ್ಯವೆನಿಸುತ್ತಿತ್ತು.

ಈ ಮನೆಯಲ್ಲೇ ನಾನು ಶ್ರೀಮಾತೆಯವರ ಆಶೀರ್ವಾದ ದೊಂದಿಗೆ ಲಕ್ಷ್ಮೀಪೂಜೆಯ ದಿನ ಸ್ವಾಮಿ ಬ್ರಹ್ಮಾನಂದರಿಂದ ಮಂತ್ರದೀಕ್ಷೆ ಪಡೆದೆ. ಆ ದಿನ ಶ್ರೀಮಾತೆಯವರು ನನ್ನ ಮೇಲೆ ಅಪಾರ ಕರುಣೆಯನ್ನು ತೋರಿದರು. ಅವರು ನನ್ನೊಂದಿಗೆ ಆಡಿದ ಕೃಪಾಪೂರ್ಣವಾದ, ಪ್ರೀತಿಯ ಮಾತುಗಳು ನನಗೆ ಹೊಸ ಸ್ಫೂರ್ತಿ ಹಾಗೂ ಶಕ್ತಿಯನ್ನು ನೀಡಿ ನನ್ನ ಜೀವನವನ್ನು ಉದ್ಧರಿಸಿದವು. ಅದರ ನೆನಪುಗಳು ಎಂದಿಗೂ ಹಸಿರಾಗಿವೆ.

ಧ್ಯಾನ ಮಾಡುವಾಗ ನನಗೆ ಚೆನ್ನಾಗಿ ಏಕಾಗ್ರತೆ ಉಂಟಾಗು ತ್ತಿಲ್ಲವೆಂದು ಒಂದು ದಿನ ನಾನು ಶ್ರೀಮಾತೆಯವರಿಗೆ ಹೇಳಿದೆ. ನನ್ನ ಮನಸ್ಸು ಚಂಚಲವಾಗಿತ್ತು, ಅಸ್ಥಿರಗೊಳ್ಳುತ್ತಿತ್ತು. ಅವರು ನಗುತ್ತ ಹೇಳಿದರು, ''ಓ, ಅದೇನೂ ದೊಡ್ಡದಲ್ಲ— ಮನಸ್ಸಿನ ಗುಣವೇ ಅದು, ಕಣ್ಣು-ಕಿವಿಗಳಂತೆ. ನಿಯಮಿತವಾಗಿ ಧ್ಯಾನ ಮಾಡು. ಭಗವಂತನ ನಾಮ ಇಂದ್ರಿಯಗಳಿಗಿಂತ ಶಕ್ತಿಶಾಲಿ ಯಾದುದು. ನೀನು ಪ್ರತಿದಿನವೂ ನಿಯಮಿತವಾಗಿ ಅಭ್ಯಾಸ ಮಾಡಿದರೆ ಕಾಲಕ್ರಮೇಣ ಎಲ್ಲವೂ ಸರಿಯಾಗುವುದು. ನಿನ್ನನ್ನು ಯಾವಾಗಲೂ ರಕ್ಷಿಸುತ್ತಿರುವ ಠಾಕೂರರನ್ನು ಸತತವೂ ಸ್ಮರಿಸು. ನಿನ್ನಿಂದ ಏನಾದರೂ ಹೆಚ್ಚುಕಡಿಮೆಯಾಗಿದ್ದರೆ, ಅದಕ್ಕಾಗಿ ಚಿಂತಿಸಬೇಡ.'' ನಾನಂದೆ: ''ಅಮ್ಮಾ, ನಾನು ಯಾವಾಗಲೂ ಅಭ್ಯಾಸ ಮಾಡುವಂತೆ ನನ್ನನ್ನು ಆಶೀರ್ವದಿಸಿ.'' ಶ್ರೀಮಾತೆ ಯವರು ಮೆಲುನಗೆ ಬೀರಿ, ''ನಿನ್ನ ಅಭ್ಯಾಸ, ಮಾತು, ಕೃತಿ ಗಳಲ್ಲಿ ನೀನು ಪ್ರಾಮಾಣಿಕನಾಗಿರು. ಇದರಿಂದ ನಿನಗೆ ಧನ್ಯ ತೆಯ ಭಾವ ಬರುವುದು. ಭೂಮಿಯ ಮೇಲಿರುವ ಎಲ್ಲ ಜೀವಿಗಳ ಮೇಲೂ ಅವರ ಕೃಪೆ ಹರಿದಿದೆ. ಅದಕ್ಕಾಗಿ ಪ್ರಾರ್ಥಿ ಸುವ ಅಗತ್ಯವೇ ಇಲ್ಲ. ಪ್ರಾಮಾಣಿಕವಾಗಿ ಧ್ಯಾನವನ್ನೂ ಮಾಡು. ಆಗ ನಿನಗೆ ಅವರ ಅನಂತ ಕೃಪೆ ಅರ್ಥವಾಗುವುದು. ಭಗವಂತನಿಗೆ ಬೇಕಾಗಿರುವುದು ಪ್ರಾಮಾಣಿಕತೆ, ಸತ್ಯಸಂಧತೆ ಹಾಗೂ ಪ್ರೀತಿ. ಭಾವನೆಯ ಬಾಹ್ಯಪ್ರದರ್ಶನ ಅವನನ್ನು ತಲುಪಲಾರದು. ಸಾಧನೆ ಮಾಡುವಾಗ ನಿಯತವಾದ ಕಾಲಾ ವಧಿಯನ್ನು ಇಟ್ಟುಕೋ. ಅವರ ನಾಮವನ್ನು ಉಚ್ಚರಿಸುತ್ತ ನಿನ್ನ ಮನಸ್ಸನ್ನು ಸಕಲ ಪ್ರಯತ್ನದಿಂದಲೂ ಅದರಲ್ಲಿ ಏಕಾಗ್ರ ಗೊಳಿಸು. ನೀನು ಪ್ರಾಮಾಣಿಕವಾಗಿ ಪ್ರಯತಪಡುತ್ತ, ಮನಸ್ಸಿ ನಿಂದ ಉಳಿದ ಎಲ್ಲ ಆಲೋಚನೆಗಳನ್ನೂ ಹೊರದೂಡಿ, ಹೃದ ಯದ ಆಳದಿಂದ ಭಗವಂತನನ್ನು ಪ್ರಾರ್ಥಿಸು. ಆಗ ನಿನ್ನ ಕರೆಗೆ ಅವನು ಓಗೊಡುವನು. ನಿನ್ನ ಪ್ರಾರ್ಥನೆಗಳನ್ನು ಅವನು ಕೃಪೆಯ ಮೂಲಕ ಈಡೇರಿಸುವನು.'' ಶ್ರೀಮಾತೆಯವರ ಪಾದ ಗಳನ್ನು ಮುಟ್ಟಿ ನಮಸ್ಕರಿಸಿ, ಅವರ ನಿರ್ದೇಶನದಂತೆ ಗೋಲಾಪ್ ಮಾ ನನಗೆ ಕೊಟ್ಟ ಪ್ರಸಾದವನ್ನು ಸ್ವೀಕರಿಸಿ ನಾನು ಮೆಟ್ಟಿಲಿಳಿದು ಬಂದೆ.

೬ ದುರ್ಗಾಚರಣ ನಾಗ್, ಶ್ರೀರಾಮಕೃಷ್ಣರ ಒಬ್ಬ ಗೃಹೀಭಕ್ತರು.

ಒಂದು ಸಂದರ್ಭದಲ್ಲಿ ಆಲಂಬಜಾರ್ ಮಠದ ಸ್ವಾಮಿ ಗಳನ್ನು ಶ್ರೀಮಾತೆಯವರ ಮನೆಗೆ ಆಹ್ವಾನಿಸಿದ್ದರು. ಆಗ ಅವ ರೊಂದಿಗೆ ಒಂದೇ ಕೋಣೆಯಲ್ಲಿ ಊಟ ಮಾಡುವ ಸೌಭಾಗ್ಯ ನನಗೆ ಲಭಿಸಿತ್ತು. ಸ್ವಾಮಿ ರಾಮಕೃಷ್ಣಾನಂದರು ದೇವಾಲಯ ದಲ್ಲಿ ಪೂಜಾಕಾರ್ಯದಲ್ಲಿ ನಿರತರಾಗಿದ್ದರು; ಹಾಗಾಗಿ ಅವರು ಬಂದಿರಲಿಲ್ಲ. ಅವರ ಅನುಪಸ್ಥಿತಿ ಎಲ್ಲರಿಗೂ ವಿಶೇಷವಾಗಿ ಕಾಡಿತ್ತು. ಶ್ರೀಮಾತೆಯವರು ಅವರಿಗೆ ಪ್ರಸಾದವನ್ನು ಸ್ವಾಮಿ ನಿರಂಜನಾನಂದರ ಮೂಲಕ ಕಳುಹಿಸಿಕೊಟ್ಟರು. ಶ್ರೀಮಾತೆ ಯವರ ಇಚ್ಛಾನುಸಾರ ತಯಾರಿಸಿದ ಆಹಾರ ಪದಾರ್ಥಗಳನ್ನು ಎಲ್ಲರಿಗೂ ಬಡಿಸಲಾಗಿತ್ತು. ಗೋಲಾಪ್ ಮಾ ಎಲ್ಲದರ ಉಸ್ತು ವಾರಿ ವಹಿಸಿಕೊಂಡಿದ್ದರು. ಶ್ರೀಮಾತೆಯವರ ಪ್ರೀತಿ, ಅನು ಕಂಪಗಳ ದ್ಯೋತಕವಾಗಿದ್ದ ಆ ಭೋಜನವನ್ನು ಎಲ್ಲರೂ ಸಂತಸ ದಿಂದ ಸ್ವೀಕರಿಸಿದ್ದರು. ಅದನ್ನು ನೋಡುವುದೇ ಒಂದು ಆನಂದ ವಾಗಿತ್ತು.

ಪ್ರಸಿದ್ಧ ನಾಟಕಕಾರರಾಗಿದ್ದ ಗಿರೀಶ್‌ಚಂದ್ರ ಘೋಷ್ ಅವರು ಶ್ರೀರಾಮಕೃಷ್ಣರ ಗೃಹೀಭಕ್ತರಲ್ಲೊಬ್ಬರು. ಅವರು ಆಗಾಗ ಅಲ್ಲಿಗೆ ಬಂದು ಸ್ವಾಮಿ ಯೋಗಾನಂದರೊಡನೆ ಹಾಗೂ ಸ್ವಾಮಿ ಬ್ರಹ್ಮಾನಂದರೊಡನೆ ಮಾತುಕತೆ ನಡೆಸುತ್ತಿದ್ದರು. ಗಿರೀಶ್‌ಚಂದ್ರ ಘೋಷ್ ಅವರು ಶ್ರೀರಾಮಕೃಷ್ಣರ ಹಾಗೂ ಶ್ರೀಮಾತೆಯವರ ಬಗ್ಗೆ ಏನನ್ನಾದರೂ ಹೇಳುತ್ತಿದ್ದರೆ, ಅವರು ವ್ಯಕ್ತಪಡಿಸುತ್ತಿದ್ದ ಮುಖಭಾವ ಅಸಾಧಾರಣವಾಗಿತ್ತು, ಬೇರೆ ಭಕ್ತರ ಬಗ್ಗೆ ಹೇಳುತ್ತಿದ್ದುದಕ್ಕಿಂತ ಭಿನ್ನವಾಗಿತ್ತು. ಅವರಿಬ್ಬರ

ದೈವಿಕತೆ, ಅಸೀಮ ಕೃಪೆ ಇವುಗಳ ಮೇಲೆ ಅವರಿಗಿದ್ದ ಅಪಾರ ಭಕ್ತಿ, ಗೌರವಗಳನ್ನು ಆವರು ತಮ್ಮ ಮಾತುಗಳಲ್ಲಿ ವ್ಯಕ್ತಪಡಿಸುತ್ತಿದ್ದರು. ಕೇಳುವವರ ಮೇಲೆ ಅವರ ಮಾತುಗಳು ಗಾಢ ಪ್ರಭಾವವನ್ನು ಬೀರುತ್ತಿದ್ದವು. ಅವರು ಬಹಳ ದಿನಗಳ ನಂತರ ನನಗೆ ಹೇಳಿದ್ದರು, ಆರಂಭದಲ್ಲಿ ಅವರಿಗೆ ಹಾಗೂ ಶ್ರೀರಾಮಕೃಷ್ಣರ ಇತರ ಭಕ್ತರಿಗೆ ಶ್ರೀಮಾತೆಯವರ ಮಹತ್ವ ಅರ್ಥವಾಗಿರಲಿಲ್ಲ ಎಂದು: ''ನಮ್ಮ ಗುರುಗಳ ಧರ್ಮಪತ್ನಿ ಎಂಬ ದೃಷ್ಟಿಯಿಂದ ನಾವು ಅವರಿಗೆ ಗೌರವ ತೋರಿಸುತ್ತಿದ್ದೆವು, ಅಷ್ಟೆ. ನಾವು ಶ್ರೀರಾಮಕೃಷ್ಣರನ್ನೇ ನಮ್ಮ ಗುರು, ಸ್ನೇಹಿತ, ತಂದೆ, ತಾಯಿ — ಎಲ್ಲವೂ ಎಂಬುದಾಗಿ ನೋಡುತ್ತಿದ್ದೆವು. ನಮ್ಮ ಕಣ್ಣುಗಳನ್ನು ತೆರೆಸಿದವನೇ ನಿರಂಜನ (ಸ್ವಾಮಿ ನಿರಂಜನಾನಂದರು). ಜೀವನದ ದುರಂತಗಳ ನಡುವೆ ದುಃಖ, ಸಂಕಟಗಳಲ್ಲಿ ಸಿಕ್ಕು ನರಳುತ್ತಿದ್ದ ನಾನು ಬಹಳ ಗೊಂದಲದಿಂದ ಒದ್ದಾಡುತ್ತಿದ್ದೆ. ನನ್ನ ಮನಸ್ಸಿಗೆ ಸಾಂತ್ವನವೇ ಲಭಿಸುತ್ತಿರಲಿಲ್ಲ. ಅಂಥ ದುಃಖದ ಸಮಯದಲ್ಲಿ ನಿರಂಜನ ನನ್ನ ಬಳಿಗೆ ಆಗಾಗ ಬಂದು ನನ್ನ ಮನಸ್ಸನ್ನು ಆಧ್ಯಾತ್ಮಿಕ ಮಾತುಕತೆಗಳ ಕಡೆಗೆ ಹೊರಳಿಸುತ್ತಿದ್ದ. ಒಂದು ದಿನ ನಾನು ಹೇಳಿದೆ, 'ತಮ್ಮಾ ನಿರಂಜನ, ಈಗ ನಾನು ನನ್ನ ಆಶ್ರಯವಾಗಿರುವ, ಅಂತಿಮ ನೆಲೆಯಾಗಿರುವ ಶ್ರೀರಾಮಕೃಷ್ಣರನ್ನು ಕಾಣಲಾರೆ ಎಂಬುದೇ ಅತ್ಯಂತ ದುಃಖದ ಸಂಗತಿ' ಎಂದು. ಆಗ ನಿರಂಜನ ನನ್ನನ್ನು ತಡೆದು, 'ಯಾಕೆ? ಶ್ರೀಮಾತೆ ಇದ್ದಾರಲ್ಲ. ಠಾಕೂರ್ ಮತ್ತು ಶ್ರೀಮಾತೆ ಇವರ ನಡುವೆ ವ್ಯತ್ಯಾಸವಿದೆಯೆ? ಲಕ್ಷ್ಮಿಯಿಲ್ಲದ ನಾರಾಯಣನನ್ನು, ಪಾರ್ವತಿಯಿಲ್ಲದ ಶಿವನನ್ನು, ಸೀತೆಯಿಲ್ಲದ ರಾಮನನ್ನು, ರಾಧೆ ಅಥವಾ ರುಕ್ಮಿಣಿಯಿಲ್ಲದ ಕೃಷ್ಣನನ್ನು ನೀನು ಊಹಿಸಬಲ್ಲೆಯಾ?' ಎಂದ. ನಾನು ದಂಗಾದೆ. 'ನೀನೇನು ಹೇಳುತ್ತಿದ್ದೀಯಾ? ಠಾಕೂರ್ ಮತ್ತು ಶ್ರೀಮಾತೆ ಇಬ್ಬರೂ ಒಂದೇ ಆಗಿದ್ದಾರೇನು?' ಎಂದು ಕೇಳಿದೆ. ಅದಕ್ಕೆ ನಿರಂಜನ, 'ನೋಡು, ನೀನು ಶ್ರೀರಾಮಕೃಷ್ಣರು ಅವತಾರವೆಂಬುದನ್ನು ಒಪ್ಪುತ್ತಿದ್ದೀಯಾ. ಭಗವಂತನೇ ಮಾನವ ರೂಪ ಧರಿಸಿ ಬಂದಿದ್ದಾನೆ ಎನ್ನುತ್ತೀಯಾ. ಅವರು ತಮ್ಮ ದಿವ್ಯ ಜೀವನದಲ್ಲಿ ಸಾಮಾನ್ಯ ಹೆಂಗಸನ್ನು ತಮ್ಮ ಆಧ್ಯಾತ್ಮಿಕ ಸಹಚರಿಯನ್ನಾಗಿ ಆರಿಸಿಕೊಂಡರು ಎಂದುಕೊಂಡಿದ್ದೀಯಾ? ಶ್ರೀರಾಮಕೃಷ್ಣರ ಮಾತುಗಳನ್ನು ನೆನಪಿಸಿಕೋ — ಬ್ರಹ್ಮ ಮತ್ತು ಶಕ್ತಿ ಅಭೇದ — ಅವು ಎರಡಾಗಿ ಕಾಣಿಸಿಕೊಂಡರೂ ಕೂಡ. ಶ್ರೀಮಾತೆಯವರೇ ಶಕ್ತಿ; ಪೂರ್ಣಬ್ರಹ್ಮರಾದ ಶ್ರೀರಾಮಕೃಷ್ಣರ ಶಕ್ತಿ ಅವರು.' ಅವರ ಮಾತುಗಳು ನನ್ನ ದೃಷ್ಟಿಯನ್ನು ತಿಳಿಯಾಗಿಸಿದವು. ಆ ಕ್ಷಣದಲ್ಲೇ ನನಗೆ ಜಗನ್ಮಾತೆಯು ಮಾನವಕುಲಕ್ಕೆ ಮುಕ್ತಿ ನೀಡಲು ಶ್ರೀಮಾತೆಯವರ ರೂಪದಲ್ಲಿ ಅವತರಿಸಿದ್ದಾರೆ ಎಂಬುದು ಅರ್ಥವಾಯಿತು. ಕೂಡಲೇ ಜಯರಾಮಬಾಟಿಗೆ ಹೋಗಿ ಶ್ರೀಮಾತೆಯವರನ್ನು ಕಾಣಲು ನನಗೆ ತೀವ್ರ ಹಂಬಲವುಂಟಾಯಿತು. ಅವರು ನನ್ನ ದುರವಸ್ಥೆಯಿಂದ ಬಂದೊದಗಿದ ದುಃಖವನ್ನು ನಿವಾರಿಸಬಲ್ಲ ಏಕೈಕ ವ್ಯಕ್ತಿಯೆಂಬುದು ನನಗೆ ಮನವರಿಕೆಯಾಗಿತ್ತು. ನನ್ನ ಇಚ್ಛೆಗೆ ಸಮ್ಮತಿ ನೀಡಿದ ನಿರಂಜನ ನನ್ನೊಂದಿಗೆ ಅಲ್ಲಿಗೆ ಹೋಗಲು ಸಿದ್ಧನಾದ. ಆದರೆ ಬಲರಾಮ ಬಸು[೭] ನನ್ನ ಈ ಯೋಜನೆಯನ್ನು ತೀವ್ರವಾಗಿ ವಿರೋಧಿಸಿದರು. ನನ್ನ ಪ್ರಾಪಂಚಿಕ ದುಃಖದುಮ್ಮಾನಗಳೊಂದಿಗೆ ಅಲ್ಲಿಗೆ ಹೋಗಿ ಶ್ರೀಮಾತೆಯವರಿಗೆ ತೊಂದರೆಯನ್ನುಂಟುಮಾಡಬಾರದು ಎಂದು ಅವರು ಹೇಳಿದರು. ಆ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರು ಕಲ್ಕತ್ತೆಯಲ್ಲಿರಲಿಲ್ಲ. ನಿರಂಜನ ಈ ವಿಷಯವನ್ನು ಬಲರಾಮ ಬಸುವಿಗೆ ತಿಳಿಸಿದ. ಆಗ ಅವರು ನಮ್ಮ ಯೋಜನೆಗೆ ಸಮ್ಮತಿಸಿದರು. ಅವರ ಸಮ್ಮತಿಯೊಂದಿಗೆ ನಾವು ಜಯರಾಮಬಾಟಿಗೆ ಹೊರಟೆವು. ಮೊದಲ ಬಾರಿಗೆ ಕಾಮಾರಪುಕುರಕ್ಕೆ ಹೋದಾಗ ಉಂಟಾದ ಆನಂದವನ್ನು ನನಗೆ ವರ್ಣಿಸಲು ಸಾಧ್ಯವಿಲ್ಲ. ಶ್ರೀರಾಮಕೃಷ್ಣರು ಹುಟ್ಟಿದ ಆ ಗುಡಿಸಲು ನನ್ನ ಪಾಲಿಗೆ ಋಷಿಗಳ ಪವಿತ್ರ ಕುಟೀರದಂತೆ ಅನ್ನಿಸಿತ್ತು. ಸುತ್ತಮುತ್ತಣ ಪರಿಸರ, ದೃಶ್ಯಾವಳಿ ತುಂಬ ಸುಂದರವಾಗಿತ್ತು. ಅಲ್ಲಿಂದ ನಾವು ಜಯರಾಮಬಾಟಿಗೆ ಹೊರಟೆವು. ಅಲ್ಲಿ ನಾವು ತಂಗಿದ್ದಾಗ ನಾನು ಶ್ರೀಮಾತೆಯವರನ್ನು ನೇರ ಕೇಳಿದೆ, ''ಅಮ್ಮಾ, ನೀವು ನನ್ನ ನಿಜವಾದ ತಾಯಿಯೆ? ಅಥವಾ ಮಲತಾಯಿಯೆ?'' ಅದಕ್ಕೆ ಶ್ರೀಮಾತೆ ಹೇಳಿದರು, ''ಹೌದು. ನಾನು ನಿನ್ನ ನಿಜವಾದ ತಾಯಿ.''

ಗಿರೀಶ ಘೋಷ್‌ರು ಮುಂದುವರಿದು ತಮ್ಮ ಭಾವಪೂರ್ಣವಾದ, ಶಕ್ತಿಶಾಲಿಯಾದ ಭಾಷೆಯಲ್ಲಿ ಹೇಳಿದರು: ''ನಿಜ, ಮಾತೆ, ಜಗನ್ಮಾತೆ — ಹಳ್ಳಿಯ ಬಡ ಹೆಂಗಸಾಗಿ ಕಾಣಿಸಿಕೊಂಡರು. ದೂರದ ಹಳ್ಳಿಯ ಗುಡಿಸಲಿನಲ್ಲಿ, ನಗರದ ಗೌಜಿ ಗದ್ದಲಗಳಿಂದ, ನಯನಾಜೂಕಿನ ಜೀವನ ನಡೆಸುವವರ ಕೃತ್ರಿಮತೆಯಿಂದ ಬಹುದೂರದಲ್ಲಿ ಅವರು ಉಳಿದಿದ್ದರು. ನಾನು ಮಾತೆಯವರ ಬಳಿ ಏನನ್ನೂ ಪ್ರಾರ್ಥಿಸಲಿಲ್ಲ. ನಾನು ಅವರ ಬಳಿಗೆ ಹೋದ ಕ್ಷಣದಲ್ಲೇ ನನ್ನ ಎಲ್ಲ ದುಃಖದುಮ್ಮಾನಗಳೂ ನಾಶವಾದವು. ನನ್ನ ಮನಸ್ಸಿನಲ್ಲಿ ಹಿಂದೆಂದಿಗೂ ನಾನು ಅನುಭವಿಸದಿದ್ದ ಒಂದು ಅಪೂರ್ವ ಶಾಂತಿ ತುಂಬಿಕೊಂಡಿತು. ಆಹ! ಆ ದಿನಗಳನ್ನು ಅದೆಂಥ ಸ್ವರ್ಗೀಯ ಸುಖದಲ್ಲಿ ನಾನು ಕಳೆದೆ!''

ಒಂದು ದಿನ ಜಯರಾಮಬಾಟಿಯಲ್ಲಿ ಶ್ರೀಮಾತೆಯವರ ಮನೆಗೆ ಒಬ್ಬ ಭಿಕ್ಷುಕ ಬಂದು ಏಕತಾರಿಯೊಂದಿಗೆ ಒಂದು ಬಂಗಾಳಿ ಹಾಡನ್ನ ಹಾಡಿದ.

ಕಿ ಆನಂದೇರ್ ಕಥಾ ಉಮೇ..

ಭಿಕ್ಷುಕ ಹಾಡನ್ನು ಮುಗಿಸಿದಾಗ ಗಿರೀಶ್ ಘೋಷ್, ಸ್ವಾಮಿ ನಿರಂಜನಾನಂದ ಹಾಗೂ ಆ ಹಾಡನ್ನು ಕೇಳಿದ ಇತರರಿಗೆ ತಮ್ಮ ಕಣ್ಣೀರನ್ನು ತಡೆಯಲಾಗಲಿಲ್ಲ. ಶ್ರೀಮಾತೆ ಕೂಡ ತಮ್ಮ ಎಲ್ಲ

೭ ಬಲರಾಮ ಬಸು ಶ್ರೀರಾಮಕೃಷ್ಣರ ಗೃಹೀ ಭಕ್ತರಲ್ಲಿ ಪ್ರಮುಖರು.

ಜೊತೆಯ ಸ್ತ್ರೀಯರೊಂದಿಗೆ ಕಣ್ಣೀರು ಸುರಿಸುತ್ತಿದ್ದರು. ಶ್ರೀಮಾತೆಯವರ ಜೀವನದ ಹಳೆಯ ಕಥೆಯನ್ನು ಅದು ನೆನಪಿಸುತ್ತಿತ್ತು. ಜಯರಾಮಬಾಟಿ ಹಾಗೂ ಸಮೀಪದ ಹಳ್ಳಿಯ ಜನರು ಶ್ರೀರಾಮಕೃಷ್ಣರನ್ನು 'ಹುಚ್ಚು ಅಳಿಯ'ನೆಂದು ಕರೆಯುತ್ತಿದ್ದರು — ಅವರ ಹೆತ್ತವರು ಅವರನ್ನು ಶ್ರೀರಾಮಕೃಷ್ಣರಿಗೆ ಮದುವೆ ಮಾಡಿ ಕೊಟ್ಟಿದ್ದಕ್ಕಾಗಿ ಅವರ ನೆರೆಹೊರೆಯವರು ಅವರ ಬಗೆ ಅನುಕಂಪ ತೋರಿಸುತ್ತ, ಅವರ ಕಷ್ಟಕರ ಪರಿಸ್ಥಿತಿಗಾಗಿ ದುಃಖವನ್ನು ವ್ಯಕ್ತಪಡಿಸಿದ್ದರು. ಆಗ ಶ್ರೀಮಾತೆ ಅವರ ಮಾತಿಗೆ ಪ್ರತಿಯಾಗಿ ಏನನ್ನೂ ಹೇಳುವಂತಿರಲಿಲ್ಲ; ಮೌನವಾಗಿ ಅವರು ಶ್ರೀರಾಮಕೃಷ್ಣರನ್ನು ಕುರಿತ ಎಲ್ಲ ನಿಂದೆಯ ಮಾತುಗಳನ್ನೂ ಕೇಳಿ ಸಹಿಸಿಕೊಂಡಿದ್ದರು. ತಮ್ಮ ಪತಿ ದೈವೋನ್ಮಾದದಿಂದ ಕೂಡಿದವರೆಂದೂ, ಸಾಮಾನ್ಯ ಜನರಿಗಿಂತ ತುಂಬಾ ಉನ್ನತ ವ್ಯಕ್ತಿಯೆಂದೂ ಅವರ ಹೃದಯ ಹೇಳುತ್ತಿತ್ತು. ಅನಂತರ ಶ್ರೀಮಾತೆ ಅವರ ಸಂಪರ್ಕಕ್ಕೆ ಬಂದಾಗಲೆಲ್ಲ ಅದೇ ದಿವ್ಯ ಆನಂದವನ್ನು ಅನುಭವಿಸಿದರು. ಜನರು ತಮ್ಮ ಪತಿಯ ಬಗ್ಗೆ ಕೆಟ್ಟ ಮಾತುಗಳನ್ನು ಆಡಿ, ಅದಕ್ಕೆ ತಮ್ಮ ದೌರ್ಭಾಗ್ಯವನ್ನೇ ಹಳಿಯುವರೆಂಬ ಕಾರಣದಿಂದ ಅವರು ಯಾರ ಮನೆಗೂ ಹೋಗುತ್ತಿರಲಿಲ್ಲ; ಯಾವುದೇ ಸಮಾರಂಭಗಳಿಗೂ ಹೋಗುತ್ತಿರಲಿಲ್ಲ. ಈಗ ಶ್ರೀರಾಮಕೃಷ್ಣರನ್ನು ಅವತಾರಪುರುಷರೆಂದೂ ಸಂತರೆಂದೂ ಜಗತ್ತು ಗೌರವಿಸತೊಡಗಿದ ನಂತರ, ದೂರದ ಗ್ರಾಮಕ್ಕೂ ಜನರು ಬಂದು ಅವರ ದರ್ಶನ ಪಡೆಯತೊಡಗಿದರು. ಈಗ ಅನೇಕ ಮಂದಿ ಭಕ್ತರು ಶ್ರೀಮಾತೆಯವರನ್ನು ಜಗನ್ಮಾತೆಯೆಂದೇ ಗೌರವಿಸುತ್ತಿದ್ದಾರೆ.

ಆ ಹಾಡು, ಕೇಳುತ್ತಿದ್ದವರ ಕಣ್ಣುಗಳಿಂದ ನೀರು ಸುರಿಯುವಂತೆ ಮಾಡಿದ್ದೇಕೆಂದರೆ, ಅದು ಶ್ರೀರಾಮಕೃಷ್ಣರ ಹಾಗೂ ಶ್ರೀ ಶಾರದಾಮಣಿ ದೇವಿ(ಶ್ರೀಮಾತೆ)ಯವರ ಹಿಂದಿನ ದಿನಗಳನ್ನು ಹೋಲುತ್ತಿತ್ತು; ಆ ಚಿತ್ರವನ್ನು ಅದು ಅವರೆಲ್ಲರ ಕಣ್ಣ ಮುಂದೆ ತಂದು ನಿಲ್ಲಿಸಿತು. ಗಿರೀಶ್ ಘೋಷರಿಂದ ನಾನು ಕೇಳಿದ್ದೆ, ಒಂದು ಗಂಟೆಗಳಷ್ಟು ಕಾಲ ಅವರೆಲ್ಲರೂ ಕಣ್ಣೀರಿಳಿಸುತ್ತ ಮಂತ್ರಮುಗ್ಧರಾಗಿ ನಿಂತಿದ್ದರು, ಎಂದು.

ಆನಂದದ ದಿನಗಳು ಮುಗಿಯುತ್ತ ಬಂದವು. ಕಾಳೀಪೂಜೆಯ ನಂತರ ಶ್ರೀಮಾತೆಯವರು ಜಯರಾಮಬಾಟಿಗೆ ಹೊರಟು ಹೋಗುತ್ತಾರೆ ಎಂದು ಕೇಳಿದೆವು. ಶ್ರೀಮಾತೆ ಹೊರಡುವ ದಿನದಂದು ಗಿರೀಶ್ ಘೋಷ್ ಅವರನ್ನು ಬೀಳ್ಕೊಡಲು ಬಂದರು. ಅವರು ಏನನ್ನೂ ಹೇಳಲಿಲ್ಲ, ಗಂಭೀರ ಭಾವದಿಂದ ಯೋಗಾನಂದರನ್ನೂ ಕರೆದು, ನೇರವಾಗಿ ಶ್ರೀಮಾತೆಯವರ ಬಳಿಗೆ ಹೋದರು. ನಾವೆಲ್ಲರೂ ಅವರನ್ನು ಹಿಂಬಾಲಿಸಿದೆವು. ಅತ್ಯಂತ ಭಾವುಕತೆಯಿಂದ ಹಾಗೂ ಅಪಾರ ಭಕ್ತಿಯಿಂದ ಅವರು ಶ್ರೀಮಾತೆಯವರ ಪಾದಗಳಿಗೆ ನಮಸ್ಕರಿಸಿ, ಕೈಮುಗಿದು ಹೇಳಿದರು: ''ಅಮ್ಮಾ, ನಾನು ನಿಮ್ಮ ಬಳಿಗೆ ಬಂದಾಗ, ನಾನು 'ಚಿಕ್ಕ' ಮಗುವೊಂದು ತಾಯಿಯ ಬಳಿಗೆ ಹೋಗುವ ಹಾಗೆಯೇ ನಾನು ಭಾವಿಸುತ್ತೇನೆ. ನಾನು 'ಬೆಳೆದ' ಮಗುವಾಗಿದ್ದರೆ, ನನ್ನ ತಾಯಿಯ ಸೇವೆ ಮಾಡುತ್ತಿದ್ದೆ. ಆದರೆ ಈಗ ತದ್ವಿರುದ್ಧ; ನೀವೇ ನಮ್ಮ ಸೇವೆ ಮಾಡುತ್ತಿದ್ದೀರಿ. ನಾವು ನಿಮ್ಮ ಸೇವೆ ಮಾಡುತ್ತಿಲ್ಲ. ನೀವು ಜಯರಾಮಬಾಟಿಗೆ ಹೋಗುತ್ತಿದ್ದೀರಿ, ಅಲ್ಲಿನ ಜನರ ಸೇವೆ ಮಾಡುತ್ತೀರಿ. ಬೇರೆಯವರಿಗಾಗಿ ನೀವು ಹಳ್ಳಿಯ ಅಡುಗೆ ಮನೆಯಲ್ಲಿ ಅಡುಗೆ ಮಾಡುತ್ತೀರಿ. ನಾನು ನಿಮ್ಮ ಸೇವೆಯನ್ನು ಹೇಗೆ ಮಾಡಲಿ? ಜಗನ್ಮಾತೆಯಾದ ನಿಮ್ಮ ಸೇವೆಯ ಬಗ್ಗೆ ನನಗಾದರೂ ಏನು ಗೊತ್ತಿದೆ?'' ಅವರ ಧ್ವನಿ ಕಂಪಿಸುತ್ತಿತ್ತು. ಭಾವಭರಿತವಾದ ಈ ಮಾತುಗಳನ್ನಾಡುವಾಗ ಆವರ ಮುಖ ರಕ್ತವರ್ಣದಿಂದ ರಂಜಿತವಾಗಿತ್ತು. ಅವರು ಮತ್ತೆ ಹೇಳಿದರು: ''ಅಮ್ಮಾ, ನಿಮಗೆ ನಮ್ಮ ಮನಸ್ಸೆಲ್ಲವೂ ಗೊತ್ತು. ನಮಗೆ ಅದು ತಿಳಿದಿಲ್ಲ. ನಾವು ನಿಮ್ಮ ಬಳಿಗೆ ಬರಲಾರೆವು. ನಿಮ್ಮ ಕೃಪೆ ಹಾಗೂ ಕರುಣೆಯಿಂದಾಗಿ ನೀವೇ ನಿಮ್ಮ ಮಕ್ಕಳನ್ನು ನೋಡಲು ಇಲ್ಲಿಗೆ ಬಂದಿದ್ದೀರಿ. ನಿಮಗೆ ಇಲ್ಲಿಗೆ ಬರುವ ಇಚ್ಛೆಯುಂಟಾದಾಗ, ನೀವು ಅದಕ್ಕಾಗಿ ಸ್ವಲ್ಪವೂ ಹಿಂಜರಿಯಬೇಡಿ. ನಿಮ್ಮ ಮಕ್ಕಳಾದ ನಾವು ಯಾವಾಗಲೂ ನಮ್ಮ ತಾಯಿಯನ್ನು ನೋಡಲು ಸಂತೋಷಪಡುವೆವು; ನಿಮ್ಮ ಯಾವುದೇ ಬಗೆಯ ಸೇವೆಯನ್ನಾದರೂ ಮಾಡಲು ನೀವು ಕೃಪೆ ತೋರಿ ಅವಕಾಶ ನೀಡಿದರೆ, ನಾವು ಅದನ್ನು ಮಾಡಿ ಧನ್ಯರಾಗುವೆವು.'' ಅನಂತರ ಅವರು ತಮ್ಮ ಹಿಂದೆ ನಿಂತಿದ್ದ ನಮ್ಮನ್ನು ಉದ್ದೇಶಿಸಿ ಹೇಳಿದರು: ''ನಮ್ಮಂತಹ ಮಾನವರಿಗೆ, ಭಗವಂತ ಮಾನವ ದೇಹವನ್ನು ಧರಿಸಿ ಅವತರಿಸಬಲ್ಲ ಎಂಬುದನ್ನು ನಂಬುವುದು ಕಷ್ಟ. ಹಳ್ಳಿಯ ಹೆಂಗಸಿನ ರೂಪದಲ್ಲಿರುವ ಜಗನ್ಮಾತೆಯ ಮುಂದೆ ನಿಂತಿದ್ದೀರಿ ಎಂಬುದನ್ನೂ ನೀವು ಅರ್ಥಮಾಡಿಕೊಳ್ಳಬಲ್ಲಿರಾ? ಯಾವುದೋ ಒಂದು ಸಾಮಾನ್ಯ ಹೆಂಗಸಿನಂತೆ ಜಗನ್ಮಾತೆ ಎಲ್ಲ ಬಗೆಯ ಮನೆಯ ಕೆಲಸಗಳನ್ನು ಮಾಡುತ್ತಾರೆ ಎಂಬುದನ್ನು ನೀವು ಊಹಿಸಬಲ್ಲಿರಾ? ಇಷ್ಟಾಗಿಯೂ ಅವರು ಇಡೀ ಪ್ರಪಂಚದ ತಾಯಿ, ಜಗನ್ಮಾತೆ; ಮಹಾಮಾಯೆ ಹಾಗೂ ಮಹಾಶಕ್ತಿ. ಎಲ್ಲ ಜೀವಿಗಳಿಗೂ ಮುಕ್ತಿ ನೀಡಲು ಹಾಗೂ ಆದರ್ಶ ಮಾತೃತ್ವವನ್ನು ತೋರಿಸಿಕೊಡಲು ಅವರು ಭೂಮಿಯಲ್ಲಿ ಕಾಣಿಸಿಕೊಂಡಿದ್ದಾರೆ.'' ಅವರ ಮಾತುಗಳು ಆಗ ಅಲ್ಲಿದ್ದವರ ಮೇಲೆ ಗಾಢವಾದ ಪ್ರಭಾವವನ್ನು ಬೀರಿತು. ಆ ಸನ್ನಿವೇಶವೇ ಶಾಂತವಾದ ಭವ್ಯತೆಯಿಂದಲೂ, ಪ್ರಸನ್ನತೆಯಿಂದಲೂ ತುಂಬಿಕೊಂಡಿತು. ನಿಜ, ಅದು ನಿಜವಾಗಿಯೂ ಸ್ವರ್ಗವೇ; ಆಧ್ಯಾತ್ಮಿಕ ಆನಂದ ಹಾಗೂ ಕೃಪೆಯಿಂದ ಕೂಡಿದ ಸ್ವರ್ಗವಾಗಿತ್ತು.

ನಾವು ರೈಲ್ವೇ ಸ್ಟೇಶನ್ನಿನವರೆಗೆ ಶ್ರೀಮಾತೆಯವರೊಂದಿಗೆ ಹೋದೆವು. ನಾವು ಅವರಿಗೆ ನಮಸ್ಕರಿಸಿದಾಗ ಅವರು ನಮ್ಮೆಲ್ಲರನ್ನೂ ಆಶೀರ್ವದಿಸಿದರು.